# ಅಬ್ಬಾ.. ಟ್ರಕ್!




ಆಟೋಮೊಬೈಲ್ ಉದ್ಯಮ ಎಷ್ಟೊಂದು ಭರ್ಜರಿಯಾಗಿ ಬೆಳೆದಿದೆ ಎನ್ನುವುದಕ್ಕೆ ಎರಡು ಉದಾಹರಣೆಗಳು ಇಲ್ಲಿವೆ.

ಇಲ್ಲಿ ಮೊದಲನೆಯದ್ದು ಅಮೆರಿಕದ ಲೀಭೆರ್ ಮೈನಿಂಗ್ ಎಕ್ವಿಪ್‌ಮೆಂಟ್ ಕಂಪೆನಿ ತಯಾರಿಸಿರುವ ದೈತ್ಯ ಟ್ರಕ್. ಇದರ ತೂಕ ಬರೋಬ್ಬರಿ 203 ಟನ್!ಟಿ282ಬಿ ಎಂಬ ಹೆಸರಿನ ಈ ಟ್ರಕ್ 29 ಅಡಿ ಅಗಲ ಮತ್ತು 24 ಅಡಿ ಎತ್ತರವಿದೆ. ಗರಿಷ್ಠ 592 ಟನ್ ಸಾಮರ್ಥ್ಯದ ಉಪಕರಣವನ್ನು ಈ ಟ್ರಕ್ ಕೊಂಡೊಯ್ಯಬಲ್ಲದು. ಇಷ್ಟು ಭಾರವನ್ನು ಹೊತ್ತು ಗಂಟೆಗೆ 64 ಕಿ.ಮೀ ವೇಗದಲ್ಲಿ ಚಲಿಸುತ್ತದೆ. ಡೀಸೆಲ್ ಮಾತ್ರವಲ್ಲ, ವಿದ್ಯುತ್‌ಚಾಲಿತವೂ ಆಗಿರುವ ಈ ಟ್ರಕ್‌ನ ಬೆಲೆ 40 ರಿಂದ 50 ಲಕ್ಷ ಅಮೆರಿಕನ್ ಡಾಲರ್!

'ನಮ್ಮಲ್ಲಿ ಗ್ಯಾರೇಜ್ ಒಳಗೆ ಈ ಟ್ರಕ್‌ಗಳನ್ನು ಪಾರ್ಕ್ ಮಾಡಲೂ ಸಾಧ್ಯವಿಲ್ಲ. ಯಾರಪ್ಪಾ.. ಈ ಟ್ರಕ್ ಖರೀದಿಸುವವರು' ಎನ್ನಬೇಡಿ. ಈ ಕಂಪೆನಿ ಪ್ರತಿ ವರ್ಷ ಹನ್ನೆರಡು ಟ್ರಕ್‌ಗಳನ್ನು ಮಾರುವ ಗುರಿ ಹೊಂದಿದೆಯಂತೆ. ಅಮೆರಿಕಾ, ಚಿಲಿ, ಇಂಡೋನೇಷ್ಯಾ ಮತ್ತು ದಕ್ಷಿಣ ಆಫ್ರಿಕಾದ  ತಾಮ್ರ, ಕಲ್ಲಿದ್ದಲು, ಬಂಗಾರ, ಕಬ್ಬಿಣದ ಅದಿರು ಗಣಿಗಳ ಮಾಲೀಕರು ಈ ಟ್ರಕ್‌ಗಳಿಗೆ ಮುಖ್ಯ ಗ್ರಾಹಕರು.

ಇನ್ನೊಂದು ಚಿತ್ರ ಜರ್ಮನಿ ತಯಾರಿಸಿದ ರೋಟೆಲ್ ಯಾನೆ, ದಾಸ್ ರೋಲೆಂಡ್ಸ್ ಹೋಟೆಲ್. ಇಲ್ಲಿ ಹೋಟೆಲ್ ರಸ್ತೆಯಲ್ಲಿ ಚಲಿಸುತ್ತಲೇ ಊರೂರು ತಿರುಗುತ್ತದೆ! ಇದು ಟ್ರಕ್ ಮಾದರಿಯ ಮೊಬೈಲ್ ಹೋಟೆಲ್. 24 ಮಂದಿ ಪ್ರಯಾಣಿಕರು ಈ ಹೋಟೆಲ್‌ನಲ್ಲಿ ಉಂಡು, ಮಲಗಿ ಪ್ರಯಾಣಿಸಬಹುದು. ಅಷ್ಟೂ ಮಂದಿಗೆ ಪ್ರತ್ಯೇಕ ಕೋಣೆಗಳು, ಅಟಾಚ್ಡ್ ಬಾತ್‌ರೂಮ್‌ಗಳೂ ಇವೆ. ಅಂದ ಹಾಗೆ, ಈ ಟ್ರಕ್‌ನಲ್ಲೇ ಹೋಟೆಲ್ ಕೂಡಾ ಇದ್ದು ಊಟಕ್ಕೆಂದು ಹೆದ್ದಾರಿ ಹೋಟೆಲ್‌ಗಳ ಮುಂದೆಯೇ ನಿಲ್ಲಿಸಬೇಕಿಲ್ಲ!

■ ಶ್ರೀ

